# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.47(ದೇವರ ಜೀವನಹಳ್ಳಿ)

## ವಾರ್ಡ್ ಸಮಿತಿ ಸಭೆ, ದಿನಾಂಕ:21-11-2020 ರ ಸಭಾ ನಡವಳ

ಸಂಖ್ಯೆ:ಸ.ಕಂ.ಅ(ಪು.ನ)/ಪಿಆರ್/04/20-21

ದಿನಾಂಕ: 21-11-2020 ರಂದು ಬೆಳ್ಳಗೆ 11.00 ಗಂಟೆಗೆ ವಾರ್ಡ್ ನಂ.47 ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ಡಿಜಿ ಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | S. Vishwanatha | Nodal Officer ward No. 61-S.K Garden & Asst. Executive Engineer, Hebbal Sub-division |
| 2 | Ravi Waddar | Asst. Executive Engineer Pulikeshinagar Sub-Division |
| 3 | Madhu | JHI (War No 47) |
| 4 | Nagaraj | Tax Inspector Revenue Department |
| 5 | Chandrashekar | Supervisor Articulture Department |
| 6 | Nagaraj | Work Inspector |
| 7 | Kodhandaramu | JE (Bescom) |
| 8 | Ahmad Ushen | Ward Member (Ward No 47) |
| 9 | Syed Ansar Pasha | Ward Member (Ward No 47) |
| 10 | Abdul Aziz | Ward Member (Ward No 47) |

ಶ್ರೀ ರವಿವಡ್ಡರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಿಕೇಶಿನಗರ ಉಪ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ ಬಿ12(5)/ಪಿಆರ್/35/20-21, ದಿನಾಂಕ: 02.10.2020 ರ ತಿದ್ದುಪಡಿ ಕಚೇರಿ ಆದೇಶದಲ್ಲಿ ಶ್ರೀ ಎಸ್. ವಿಶ್ವನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಬ್ಬಾಳ ಉಪ ವಿಭಾಗ ರವರನ್ನು ವಾರ್ಡ್ ನಂ.47ರ ನೋಡಲ್ ಅಧಿಕಾರಿಯಾಗಿ ನೇಮಿಸಿರುವುದರಿಂದ ಸದರಿಯವರಿಗೆ ಸಮಿತಿಯ ಪರವಾಗಿ ಸ್ವಾಗತವನ್ನು ಕೋರುತ್ತಾ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಡಲು ಕೋವಿಡ್-19 ವೈರಸ್‌ನ ಬಗ್ಗೆ ಸರ್ವಾಜನಿಕರಿಗೆ ಕಡ್ಡಯವಾಗಿ ಮಾಸ್ಕ ಧರಿಸುವಂತೆ ಆಟೋಗಳಲ್ಲಿ ಪ್ರಚಾರ ಮಾಡಲು ಸಭೆಯಲ್ಲಿ ತಿಳಿಸಿರುತ್ತಾರೆ.
- ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ಒಟ್ಟು 22 ಆಟೋ ಟಿಪ್ಪರ್‌ಗಳದ್ದು ಅವುಗಳ ನೋಂದಣಿ ಸಂಖ್ಯೆಯ ವಿವರಗಳನ್ನು ಶ್ರೀ ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಗೆ ತಿಳಿಸಿರುತ್ತಾರೆ.
- ಸರ್ವೇ ನಂ.7 ಸರ್ಕಾರಿ ಶಾಲೆ ಹತ್ತಿರ ಸಬ್‌ಲೈನ್ ಕೆಲಸ ಪ್ರಾರಂಭಿಸಲು ಸಂಬಂಧಪಟ್ಟ ಬಿಡಬ್ಲ್ಯೂಎಸ್ಎಸ್‌ಬಿ ರವರು ಸಭೆಗೆ ಗೈರುಹಾಜರಿಯಾಗಿದ್ದು ದೂರವಾಣಿ ಮೂಖಾಂತರ ಸಂಪರ್ಕಿಸಿ ಕಾಮಗಾರಿ ಪೂರ್ಣಗೊಳಿಸುವಂತೆ ಶೀಘ್ರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
- ಮೋದಿ ಗಾರ್ಡನ್ 6ನೇ ಕ್ರಾಸ್ ನಲ್ಲಿ ಟ್ರಾನ್ಸ್ ಪಾರಂನ್ನು ಅಳವಡಿಸಲು ಬೇಸ್ಕಂ ಅಧಿಕಾರಿ ಶ್ರೀ ರಾಮು ಸ.ಕಾ.ಇ (ಬೆಸ್ಕಾಂ) ರವರಿಗೆ ಸ್ಥಳ ಪರಿಶೀಲಣೆ ನಡೆಸಿ ಸ್ಥಳದ ಲಭ್ಯತೆಯನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಯೊಂದಿಗೆ ಪತ್ರ ವ್ಯವಹರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿಲಾಯಿತು.
- 3ನೇ ಕ್ರಾಸ್ ಮೋದಿ ಗಾರ್ಡನ್‌ನಲ್ಲಿ ಸ್ಯಾನಿಟರಿ ಡ್ರೈನ್ ಬ್ಲಾಕ್ ಆಗಿದ್ದು ಅದನ್ನು ಸರಿಪಡಿಸಲು ತಿಳಿಸಲಾಯಿತು.
- 3ನೇ ಕ್ರಾಸ್ ಮೋದಿ ಗಾರ್ಡನ್ ನಲ್ಲಿ ವಿದ್ಯೂತ್ ತಂತಿಯನ್ನು ಬೇರೆಕಡೆಗೆ ಸ್ಥಳಾಂತರಿಸಲು ಸಭೆಯಲ್ಲಿ ತಿಳಿಸಲಾಯಿತು.

ಮು.ತಿ.ನೋ.

- ಡಿ.ಜೆ.ಹಳ್ಳಿ ಮಾರ್ಕೆಟ್‌ನ ಎನ್‌ಕ್ರೋಚ್‌ಮೆಂಟ್ ತೆರವುಗೊಳಿಸಲು ಅಗತ್ಯ ಪೋಲೀಸ್ ಸಿಂಭದಿಯೊಂದಿಗೆ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
- ವಾರ್ಡ್ ಸದಸ್ಯರು ಈಗ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಂಪ್ಯಾಕ್ಟರ್ ಚಿಕ್ಕದಾಗಿದ್ದು ಹೆಚ್ಚುವರಿ ಅಥವಾ ಹೆಚ್ಚುವರಿ ಪರಿಮಾಣದ ಸಾಮರ್ಥ್ಯವುಳ್ಳ ಕಾಂಪ್ಯಾಕ್ಟರ್ ಅನ್ನು ಒದಗಿಸಲು ಸಂಬಂಧಟ್ಟ ಘನತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರಿಗೆ ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು 2 ದಿನಕೊಂಮ್ಮೆ ಹೆಚ್ಚುವರಿ ಸಾರ್ಮತ್ಯವುಳ್ಳ ಗುತ್ತಿಗೆದಾರರು ಕಳುಹಿಸುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ ಹಾಗೂ ಹಾಲಿ ವಾರ್ಡ್ ಸಂಖ್ಯೆ 48 ರ ಘನತ್ಯಾಜ್ಯವನ್ನು ಸಹ ವಾರ್ಡ್ 47 ರ ವತಿಯಿಂದಲೇ ನಿರ್ವಹಣೆ ಮಾಡಲು ಕಷ್ಟಸಾಧ್ಯವಾಗಿರುವುದಾಗಿ ತಿಳಿದುಬಂದಿದ್ದು ಅದರಂತೆ ವಾರ್ಡ್ 48 ರ ಘನತ್ಯಾಜ್ಯ ನಿರ್ವಹಣೆಯನ್ನು ಸಂಬಂಧಪಟ್ಟ ವಾರ್ಡ್ ವತಿಯಿಂದ ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ ಸ.ಕಾ.ಪಾ.ಅ (ಘ.ತ್ಯಾ.ನಿ) ರವರಿಗೆ ಪತ್ರ ಬರೆದು ತಿಳಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.
- ವಾರ್ಡ್ ನಂ.47 ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ಈಗ ಒಬ್ಬ ಮಾರ್ಷಲ್ ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಹೆಚ್ಚುವರಿಯಾಗಿ 03 ಮಾರ್ಷಲ್‌ಗಳನ್ನು ನೇಮಿಸಲು ಎಇಇ (ಎಸ್. ಡಬ್ಲ್ಯೂ.ಎಂ) ರವರಿಗೆ ತಿಳಿಸಲಾಯಿತು.
- ಸಭೇಯಲ್ಲಿ ಬಿಡ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳ ಬೇರೆಡೆ ವಾರ್ಡ್ ಸಭೆಯಲ್ಲಿ ಬಾಗವಹಿಸಿದ್ದು ಈ ಸಭೆಯಲ್ಲಿ ಗೈರುಹಾಜರಿಯಾಗಿರುವುದರಿಂದ ಸಾರ್ವಜನಿಕರು ಕುಡಿಯುವ ನೀರಿನ ಜೊತೆಗೆ ಕೊಳಚೆ ನೀರು ಮಿಶ್ರವಾಗಿ ಸರಬರಾಜು ಆಗುತ್ತಿರುವುದಾಗಿ ತಿಳಿಸಿದ್ದು ಅದರಂತೆ ಈ ಕೂಡಲೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಅಗತ್ಯ ದುರಸ್ಥಿ ಕಾಮಗಾರಿ ಕೈಗೊಂಳ್ಳುವಂತೆ ದೂರವಾಣಿ ಮುಖಾಂತರ ಸಂಪರ್ಕಿಸಿ ಶ್ರೀ ರಾಹುಲ್ ಸಹಾಯಕ ಅಭಿಯಂತರರು ಬಿಡ್ಲ್ಯೂಎಸ್‌ಎಸ್‌ಬಿ ರವರಿಗೆ ಸೂಚಿಸಲಾಯಿತು.
- ಸಭೆಯಲ್ಲಿ ಕಿರಿಯ ಅಭಿಯಂತರರು (ವಿದ್ಯುತ್) ಬಿಬಿಎಂಪಿ ರವರು ಗೈರುಹಾಜರಿಯಾಗಿದ್ದು ಸಾರ್ವಜನಿಕರ ದೂರಿನ ಮೇರೆಗೆ ಎಲ್.ಇ.ಡಿ ಲೈಟ್‌ಗಳನ್ನು ಪರಿಶೀಲಿಸಿ ಅಗತ್ಯ ದುರಸ್ಥಿ ಪಡಿಸಲು/ಬದಲಿಸಲು ಸೂಚಿಸಲಾಯಿತು.
- ಸಭೆಯಲ್ಲಿ ಬಹುತೇಕ ಇಲಾಖೆಗಳ ಅಧಿಕಾರಿಗಳು ಗೈರುಹಾಜರಿಯಾಗಿರುವುದನ್ನು ಗಂಬೀರವಾಗಿ ಪರಿಗಣಿಸಿ ಮುಂದಿನ ಸಭೆಗೆ ಸಂಬಂಧಪಟ್ಟ ಇಲಾಖೆಗಳ ಎಲ್ಲಾ ಅಧಿಕಾರಿಗಳನ್ನು ಹಾಜರಾಗುವಂತೆ ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸುವ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ವಹಿಸುವಂತೆ ಆರೋಗ್ಯ ವೈದ್ಯಾಧಿಕಾರಿಗಳ ಮೂಲಕ ತಿಳಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ವಿಶ್ವನಾಥ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.